**ದಿನಾಂಕಃ 22.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ  ಕೆ ಆರ್ **ವಕೀಲರಿಂದಃ**

ನಾನು 4 ನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ದಾವಾ ಆಸ್ತಿಗಳಲ್ಲಿ ನನಗೂ ಭಾಗ ಬರಬೇಕು ಎಂದು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಅನುಸೂಚಿ ಸ್ವತ್ತುಗಳು ಮೂಲತಃ ದೇವಮ್ಮ ಮತ್ತು ಮರಿಶೆಟ್ಟಿರವರಿಗೆ ಸೇರಿದ ಆಸ್ತಿಗಳಾಗಿರುತ್ತವೆ. ಸದರಿ ಮರಿಶೆಟ್ಟಿರವರು ಸುಮಾರು 25-30 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಅದೇ ರೀತಿ ದೇವಮ್ಮ ರವರು 15-20 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸದರಿ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಮರಿಶೆಟ್ಟಿರವರ ತಂದೆಯ ಹೆಸರು ಕೊಂಗರಹಳ್ಳಿ ಈರಶೆಟ್ಟಿ ಸದರಿ ಕೊಂಗರಹಳ್ಳಿ ಈರಶೆಟ್ಟಿಯವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಸದರಿಯವರ ಹೆಸರುಗಳೆಂದರೆ ಮರಮ್ಮ, ಕಾಳೀರಮ್ಮ, ಸಿದ್ದಮ್ಮ, ಸಿದ್ದಶೆಟ್ಟಿ ಮರಿಶೆಟ್ಟಿ ಮರಿಲಿಂಗಶೆಟ್ಟಿ ಸದರಿಯವರಲ್ಲಿ ಸಿದ್ದಮ್ಮರವರಿಗೆ ವಿವಾಹವಾಗಿ ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಮರಮ್ಮರವರಿಗೆ ವಿವಾಹವಾಗಿ ಇಬ್ಬರು ಗಂಡು ಮಕ್ಕಳು ಇದ್ದರು. ಸದರಿಯವರಲ್ಲಿ ಒಬ್ಬರು ಮರಣ ಹೊಂದಿರುತ್ತಾರೆ.

ಕಾಳೀರಮ್ಮರವರಿಗೆ ವಿವಾಹವಾಗಿ 4 ಮಕ್ಕಳು ಇದ್ದರು. ಅವರುಗಳ ಹೆಸರುಗಳೆಂದರೆ ಕೃಷ್ಣ ಶೆಟ್ಟಿ ನೀಲಶೆಟ್ಟಿ ಲಕ್ಷ್ಮಮ್ಮ ಮತ್ತು ಮರಮ್ಮ. ಸದರಿಯವರಲ್ಲಿ ಕೃಷ್ಣ ಶೆಟ್ಟಿ ನೀಲಶೆಟ್ಟಿ ಮತ್ತು ಮರಮ್ಮರವರು ಮರಣ ಹೊಂದಿ ಲಕ್ಷ್ಮಮ್ಮರವರು ಬದುಕಿರುತ್ತಾರೆ. ಸದರಿ ಕೃಷ್ಣ ಶೆಟ್ಟಿ ನೀಲಶೆಟ್ಟಿ ಮತ್ತು ಮರಮ್ಮರವರಿಗೆ ಮಕ್ಕಳು ಇರುತ್ತಾರೆ. ಸದರಿ ಕೃಷ್ಣ ಶೆಟ್ಟಿ ನೀಲಶೆಟ್ಟಿ  ಮತ್ತು ಮರಮ್ಮರವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಕೊಂಗರಹಳ್ಳಿ ಈರಶೆಟ್ಟಿರವರ ಮಗ ಸಿದ್ದಶೆಟ್ಟಿರವರಿಗೆ ಇಬ್ಬರು ಮಕ್ಕಳು ಅವರ ಹೆಸರುಗಳೆಂದರೆ ಬಸವಶೆಟ್ಟಿ ಮತ್ತು ಸಿದ್ದಶೆಟ್ಟಿ ಸದರಿ ಬಸವಶೆಟ್ಟಿ ಮತ್ತು ಸಿದ್ದಶೆಟ್ಟಿ ರವರು ಮರಣ ಹೊಂದಿರುತ್ತಾರೆ. ಸದರಿ ಬಸವಶೆಟ್ಟಿರವರಿಗೆ ಸಿದ್ದರಾಜು ಎಂಬ ಒಬ್ಬ ಗಂಡು ಮಗ ಮತ್ತು ಮರಮ್ಮ ಎಂಬ

ಒಬ್ಬಳು ಹೆಣ್ಣು ಮಗಳು. ಸದರಿಯವರಲ್ಲಿ ಸಿದ್ದರಾಜುರವರು ಮರಣ ಹೊಂದಿರುತ್ತಾರೆ. ಸದರಿ ಸಿದ್ದರಾಜರುವರಿಗೆ ಇಬ್ಬರು ಗಂಡು ಮಕ್ಕಳು ಅವರು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಿದ್ದರಾಜುರವರ ಮಕ್ಕಳ ಹೆಸರು ಮಹೇಶ ಮತ್ತು ಪ್ರಭಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಿದ್ದರಾಜುರವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಕೊಂಗರಹಳ್ಳಿ ಈರಶೆಟ್ಟರವರ ಮಗ ಮರಿಲಿಂಗಶೆಟ್ಟರವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಅವರ ಹೆಸರುಗಳೆಂದರೆ ರಾಜಮ್ಮ, ಮರಮ್ಮ, ಕಮಲಮ್ಮ, ಈರಶೆಟ್ಟಿ ಮರಿಸ್ವಾಮಿ  ಮತ್ತು ಮಹದೇವಸ್ವಾಮಿ. ಸದರಿಯವರಲ್ಲಿ ಈರಶೆಟ್ಟಿ ಕಮಲಮ್ಮ ಮತ್ತು  ಮರಮ್ಮರವರು ಮರಣ ಹೊಂದಿರುತ್ತಾರೆ. ಸದರಿಯವರಲ್ಲಿ ಕಮಲಮ್ಮರವರಿಗೆ ಸತೀಶ ಮತ್ತು ರಮೇಶ ಎಂಬ ಇಬ್ಬರು ಗಂಡು ಮಕ್ಕಳು ಇದ್ದರು. ಸದರಿ ಸತೀಶ ಮತ್ತು ರಮೇಶ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ಈರಶೆಟ್ಟರವರಿಗೆ ಲಕ್ಷ್ಮಿ ಮಂಜುಳ ಎಂಬ ಇಬ್ಬರು ಹೆಣ್ಣು ಮಕ್ಕಳು ಮತ್ತು ಮಹೇಶ ಎಂಬ ಗಂಡು ಮಗ ಇದ್ದಾರೆ. ಸದರಿ ಲಕ್ಷೀ ಮತ್ತು ಮಂಜುಳರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ** ಕಾಲಾವಕಾಶ **ಕೋರಿದ್ದರಿಂದ** ಕಾಲಾವಕಾಶ **ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ